**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 274/2018**

| | | | |
|---|---|---|---|
| **ಹೆಸರು** | : | **ಬಸವರಾಜ** | **ದೋ.ಸಾ. 9** |
| **ತಂದೆಯ ಹೆಸರು** | : | **ಲಕ್ಷ್ಮಣರಾವ** | **ಪ್ರಾ.ಸಾ. 7** |
| **ವಯಸ್ಸು** | : | **61 ವರ್ಷ** | **ದಿನಾಂಕಃ 29-11-2023** |
| **ಉದ್ಯೋಗ** | : | **ಪಂಚಾಯತ್ ರಾಜ್ ಇಲಾಖೆಯ ಸಂಪನ್ಮೂಲ ವ್ಯಕ್ತಿ** | |
| **ವಾಸಸ್ಥಳ** | : | **ಕನಕಪೂರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ನಾನು ಕಳೆದ 20 ವರ್ಷಗಳಿಂದ ಚಿಂಚೋಳಿ ತಾಲೂಕು ಪಂಚಾಯತಿಯಲ್ಲಿ ಪಂಚಾಯತ್ ರಾಜ್ ವಿಷಯದ ಕುರಿತಾದ ಸಂಪನ್ಮೂಲ ವ್ಯಕ್ತಿಯಾಗಿ ಮತ್ತು ಪಂಚಾಯತಿ ಸದಸ್ಯರಿಗೆ ಕೊಡಲಾಗುವ ತರಬೇತಿಗಳಿಗೆ ಸಂಯೋಜಕನಾಗಿ ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದ ಆರೋಪಿ ನನಗೆ ಗೊತ್ತು. ಸದರಿ ಆರೋಪಿ ಚಿಂಚೋಳಿ ತಾಲೂಕು ಪಂಚಾಯತ್ ಕಾರ್ಯಲಯದಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದರು.

ಅದೇ ರೀತಿ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ನನಗೆ ಗೊತ್ತು. ಚಾಸಾ-1 ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾಗಿದ್ದರು. ಚಾಸಾ-8, 11 ಮತ್ತು 14 ರವರು ಗೊತ್ತು. ಸದರಿಯವರೆಲ್ಲರು ತಾಲೂಕು ಪಂಚಾಯತಿಯ ಸರ್ಕಾರಿ ನೌಕರರು.

2014 ನೇ ಇಸವಿಯಲ್ಲಿ ನಾನು ಗ್ರಾಮಿಣಾಭೀವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಭಾಗಿತ್ವದಲ್ಲಿ ನಡೆದಿದ್ದ ಮತ್ತು ಪಂಚಾಯತಿ ಸದಸ್ಯರಿಗೆ ಆಯೋಜಿಸಲಾಗಿದ್ದ ಉಪಗ್ರಹ ಆಧಾರಿತ ವಿಕೋಪ ನಿರ್ವಹಣೆ ಕುರಿತಾಗಿ ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳಿಗೆ ತರಬೇತಿ ನೀಡಿದ್ದೇನೆ. ಸದರಿ ತರಬೇತಿ ಕಾರ್ಯಕ್ರಮದ ಮೇಲುಸ್ತುವಾರಿಯನ್ನು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಚಾಸಾ-1 ರವರೇ ವಹಿಸಿದ್ದರು. ಸದರಿ ತರಬೇತಿ ಕಾರ್ಯಕ್ರಮದ ಸಂದರ್ಭದಲ್ಲಿ ಬೇಕಾಗುವ ವ್ಯವಸ್ಥೆಯನ್ನು ಮತ್ತು ತರಬೇತಿಗೆ ಹಾಜರಾದ ಶಿಬಿರಾರ್ಥಿಗಳಿಗೆ ಊಟ-ಉಪಚಾರದ ವ್ಯವಸ್ಥೆ ನೋಡಿಕೊಳ್ಳಲು

ವಿಷಯ ನಿರ್ವಾಹಕರನ್ನು ನೇಮಕ ಮಾಡಲಾಗಿತ್ತು. ಸಾಕ್ಷಿ ಸ್ವ-ಇಚ್ಛೆಯಿಂದ ಸದರಿ ವಿಷಯ ನಿರ್ವಾಹಕರ ಹೆಸರು ನನಗೆ ಈಗ ನೆನಪಿಲ್ಲ ಎನ್ನುತ್ತಾರೆ.

ಸದರಿ ತರಬೇತಿ ಕಾರ್ಯಕ್ರಮಕ್ಕೆ ಬಿಡುಗಡೆಯಾಗಿದ್ದ ಹಣದಲ್ಲಿ ಅವ್ಯವಹಾರ ನಡೆದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ನಾನು ತರಬೇತಿಯಲ್ಲಿ ಗೌರವಧನದ ಆಧಾರದ ಮೇರೆ ಶಿಬಿರಾರ್ಥಿಗಳಿಗೆ ತರಬೇತಿ ಕೊಟ್ಟಿದ್ದು ಸದರಿ ತರಬೇತಿ ಕಾರ್ಯಕ್ರಮದ ವ್ಯವಸ್ಥೆಯನ್ನು ಆಡಳಿತವನ್ನು ಯಾರು ಮಾಡಿದ್ದರು ಮತ್ತು ಹೇಗೆ ನಿಭಾಯಿಸಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ಪಂಚಾಯತಿಯಲ್ಲಿ ವ್ಯವಸ್ಥಾಪನಾಗಿದ್ದ ಆರೋಪಿ ಅವ್ಯವಹಾರ ಮಾಡಿರುವ ಪ್ರಕರಣದ ಸಂಬಂಧ ಸಾಕ್ಷಿ ಹೇಳಬೇಕೆಂದು ನನ್ನನ್ನು ಕರೆಸಿದ್ದಾರೆ ಎನ್ನುತ್ತಾರೆ. ಆರೋಪಿ ಯಾವ ರೀತಿಯ ಅವ್ಯವಹಾರ ಮಾಡಿದ್ದಾನೆಂದು ನನಗೆ ಗೊತ್ತಿಲ್ಲ.

ಪೋಲೀಸರು ಈ ಪ್ರಕರಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 09-07-2014 ರಿಂದ 11-07-2014 ರವೆರೆಗೆ ನಾನು ಗ್ರಾಮಿಣಾಭೀವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಭಾಗಿತ್ವದಲ್ಲಿ ನಡೆದಿದ್ದ ಮತ್ತು ಪಂಚಾಯತಿ ಸದಸ್ಯರಿಗೆ ಆಯೋಜಿಸಲಾಗಿದ್ದ ಉಪಗ್ರಹ ಆಧಾರಿತ ವಿಕೋಪ ನಿರ್ವಹಣೆ ಕುರಿತಾಗಿ ಹಮ್ಮಿಕೊಳ್ಳಲಾಗಿದ್ದ ತರಬೇತಿ ಕಾರ್ಯಕ್ರಮದಲ್ಲಿ 50 ಶಿಬಿರಾರ್ಥಿಗಳಿಗೆ ತರಬೇತಿ ನೀಡಿದ್ದೆ ಎಂದರೆ ಸರಿ. ಸದರಿ ತರಬೇತಿ ಕಾರ್ಯಕ್ರಮದ ಉಸ್ತುವಾರಿಯನ್ನು ಆರೋಪಿ ಶಿವಶರಣಪ್ಪ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಶಿಬಿರಾರ್ಥಿಗಳಿಗೆ ಪ್ರತಿನಿತ್ಯ ದುರ್ಗಾ ಭವನ ಹೋಟೆಲನಿಂದ ಊಟದ ವ್ಯವಸ್ಥೆ ಮಾಡಲಾಗಿತ್ತು. ಸದರಿ ಊಟದ ವ್ಯವಸ್ಥೆಗೆ ಒಟ್ಟು ರೂ.11840/- ಖರ್ಚು ತಗುಲಿರುತ್ತದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

ಸದರಿ ತರಬೇತಿಗೆ ತಗಲುವ ಖರ್ಚು ವೆಚ್ಚಕ್ಕಾಗಿ ಪಂಚಾಯತಿಯಿಂದ ದಿನಾಂಕ 30-07-2014 ರಂದು ಕೃಷ್ಣಾ ಗ್ರಾಮೀಣ ಬ್ಯಾಂಕಿಗೆ ಸೇರಿದ 280996 ರ ರೂ.5,690/- ರ ಚೆಕ್ಕನ್ನು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಚಾಸಾ-1 ಮತ್ತು ಸಹಾಯಕ ಲೆಕ್ಕಾಧಿಕಾರಿಗಳಾದ ಚಾಸಾ-12 ರವರು ಜಂಟಿಯಾಗಿ ಸಹಿ ಮಾಡಿ ಆರೋಪಿಗೆ ಕೊಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಚೆಕ್ಕನ್ನು ತಿದ್ದುಪಡಿ ಮಾಡಿದ ಆರೋಪಿ ರೂ.5,690/- ರೂಪಾಯಿ ಎಂದು ಬರೆದಿರುವ ಕಡೆ 4 ಎಂಬ ಅಂಕಿಯನ್ನು ಸೇರಿಸಿ ಒಟ್ಟು ರೂ.45,690/- ಗಳಿಗೆ ಚೆಕ್ಕು ಕೊಟ್ಟಿರುವಂತೆ ತಿದ್ದುಪಡಿ ಮಾಡಿ ಮತ್ತು ಅಕ್ಷರಗಳಲ್ಲಿ ನಲವತ್ತೈದು ಸಾವಿರದ ಆರು ನೂರಾ ತೊಂಬತ್ತು ಎಂದು ಬರೆದುಕೊಂಡು ಸದರಿ ಚೆಕ್ಕನ್ನು ತನ್ನ ಸ್ವಂತ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

ಅದೇ ರೀತಿ ದಿನಾಂಕ 09-09-2014 ರಂದು ಚಾಸಾ-1 ಮತ್ತು ಚಾಸಾ-12 ರವರ ಜಂಟಿ ಸಹಿ ಇದ್ದ ಚೆಕ್ ನಂ.280997 ನ್ನು ತರಬೇತಿ ಖರ್ಚು ವೆಚ್ಚಕ್ಕಾಗಿ ತಗಲುವ ರೂ.6,150/- ಗಳಿಗೆ ಕೊಟ್ಟಿದ್ದು, ಸದರಿ ಚೆಕ್ಕನ್ನು ತಿದ್ದುಪಡಿ ಮಾಡಿ ಆರೋಪಿ, ರೂ.6,150/- ಎಂದು ಬರೆದಿರುವ ಕಡೆ 4 ಎಂಬ ಅಂಕಿಯನ್ನು ಸೇರಿಸಿ ಒಟ್ಟು ರೂ.46,150/- ಗಳಿಗೆ ಚೆಕ್ಕು ಕೊಟ್ಟಿರುವ ರೀತಿ ತಿದ್ದುಪಡಿ ಮಾಡಿ ಮತ್ತು ಅಕ್ಷರಗಳಲ್ಲೂ ನಲವತ್ತಾರು ಸಾವಿರದ ನೂರಾ ಐವತ್ತು ಎಂದು ತಿದ್ದುಪಡಿ ಮಾಡಿ ಸದರಿ ಚೆಕ್ಕನ್ನೂ ಸಹ ತನ್ನ ಸ್ವಂತ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಸದರಿ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಮೇಲೆ ಉಲ್ಲೇಖಿಸಲಾದ ಎರಡು ಬ್ಯಾಂಕ್ ಚೆಕ್ಕುಗಳನ್ನು ನಮ್ಮ ಪಂಚಾಯತಿ ಬ್ಯಾಂಕ್ ಖಾತೆ ನಂ.2059049568 ರಿಂದ ಆರೋಪಿಗೆ ತರಬೇತಿ ವೆಚ್ಚಕ್ಕಾಗಿ ತಲಾ ರೂ.5,690/- ಮತ್ತು ರೂ.6,150/- ರೂ.ಗಳಿಗೆ ಕೊಟ್ಟಿದ್ದು, ಸದರಿ ಚೆಕ್ಕುಗಳನ್ನು ಮೇಲೆ ಹೇಳಿದಂತೆ ತಿದ್ದುಪಡಿ ಮಾಡಿಕೊಂಡಿದ್ದ ಆರೋಪಿ ತನ್ನ ವಯಕ್ತಿಕ ಬ್ಯಾಂಕ್ ಖಾತೆ ಸಂಖ್ಯೆ 11059100009766 ಕ್ಕೆ ಜಮಾ ಮಾಡಿಕೊಂಡು ಹೆಚ್ಚುವರಿಯಾಗಿ ರೂ.80,000/- ಸರಕಾರಿ ಹಣವನ್ನು ಸರಕಾರಕ್ಕೆ ವಂಚಿಸಿ ತನ್ನ ಸ್ವಂತ ಖಾತೆಗೆ ಚೆಕ್ಕನ್ನು ನಕಲು ಮಾಡಿ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಸದರಿ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರಕಾರಕ್ಕೆ ಮೋಸ ಮಾಡುವ ಮಾಡುವ ಉದ್ದೇಶದಿಂದ ಆರೋಪಿ ಚಾಸಾ-1 ಮತ್ತು ಚಾಸಾ-12 ರವರ ಜಂಟಿ ಸಹಿಗಳು ಇದ್ದ ಚೆಕ್ಕುಗಳನ್ನು ತಿದ್ದುಪಡಿ ಮಾಡಿ ಸರಕಾರಿ ಹಣವನ್ನು ತನ್ನ ಸ್ವಂತ ಉಪಯೋಗಕ್ಕೆ ಬಳಸಿಕೊಂಡಿರುತ್ತಾನೆ ಎಂದು ಚಾಸಾ-13 ರವರ ಕಡೆಯಿತಂದ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ.

ಮೇಲ್ಕಂಡಂತೆ ಆರೋಪಿ ಪಂಚಾಯತ್ ರಾಜ್ ಇಲಾಖೆಗೆ ಮತ್ತು ಸರಕಾರಕ್ಕೆ ವಂಚಿಸಿರುವ ವಿಚಾರ 2015 ನೇ ಸಾಲಿನಲ್ಲಿ ನಮ್ಮ ಇಲಾಖೆಯ ಆಂತರಿಕ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಬೆಳಕಿಗೆ ಬಂದಿದ್ದು ಈ ಸಂಬಂಧ ದಿನಾಂಕ 21-01-2015 ರಂದು ಚಾಸಾ-1 ರವರು ಚಿಂಚೋಳಿ ಪೋಲೀಸರಿಗೆ ಆರೋಪಿ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ದೂರು ಕೊಟ್ಟಿರುವ ಬಗ್ಗೆ ಗೊತ್ತಾಯಿತು ಆದರೆ ಅವ್ಯವಹಾರ ಹೇಗೆ ಬೆಳಕಿಗೆ ಬಂತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ದಿನಾಂಕ 05-06-2017 ರಂದು ಈ ಪ್ರಕರಣದ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು ಮತ್ತು ಸದರಿ ಸಂದರ್ಭದಲ್ಲಿ ಆರೋಪಿ ಚಾಸಾ-1 ಮತ್ತು 12 ರವರ ಜಂಟಿ ಸಹಿಗಳಿದ್ದ ಚೆಕ್ಕುಗಳನ್ನು ಮೋಸ ಮಾಡುವ ಉದ್ದೇಶದಿಂದ ತಿದ್ದುಪಡಿ ಮಾಡಿ  ಸರ್ಕಾರಕ್ಕೆ ಸೇರಿದ ರೂ.80000/- ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ವಂಚಿಸಿದ್ದಾನೆ ಮತ್ತು ಸದರಿ ವಂಚನೆ ಕೃತ್ಯ ದಿನಾಂಕ 30-07-2014 ರಿಂದ 09-09-2014 ರ ಅವಧಿಯಲ್ಲಿ ಆಗಿತ್ತು ಎಂದು ನನಗೆ ಚಾಸಾ-13 ರವರಿಂದ ಗೊತ್ತಾಗಿರುತ್ತದೆ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ನಾನು ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿಲ್ಲ ಎನ್ನುತ್ತಾರೆ.

ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯನ್ನು ಈಗ ನಿಪಿ-20 ಎಂದು ಗುರುತಿಸಲಾಯಿತು.

ನಿಪಿ-20 ರಂತೆ ಹೇಳಿಕೆ ಕೊಟ್ಟಿದ್ದರು ಮತ್ತು ಅವ್ಯವಹಾರದ ಬಗ್ಗೆ ಚಾಸಾ-13 ರವರಿಂದ ನನಗೆ ಗೊತ್ತಾಗಿದ್ದರು ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಹೇಳಿಕೆ ಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಬಿ.ವಿ. ವಕೀಲರಿಂದಃ ಇಲ್ಲಾ.**

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**